# ಹಿಮೋತ್ಸವ!

ಅಮೆರಿಕ, ರಷ್ಯ, ಜರ್ಮನಿ, ರುಮೇನಿಯಾ ಅಷ್ಟೇ ಏಕೆ ನಮ್ಮದೇ ಆದ ಕಾಶ್ಮೀರ ಡಿಸೆಂಬರ್ ಅಂತ್ಯ– ಜನವರಿ ಆರಂಭದಲ್ಲಿ ಗಡಗಡ ನಡುಗಿವೆ. ಸಂತಸದಿಂದ ಆಚರಿಸಬೇಕಾದ ಕ್ರಿಸ್‌ಮಸ್, ಸಂಭ್ರಮ ಪಡಬೇಕಾದ ಹೊಸ ವರ್ಷದ ಆರಂಭ ಎಲ್ಲವೂ ಭೀತಿಯ ನೆರಳಲ್ಲಿಯೇ ಕಳೆದರೆ ಹೇಗೆ?

ಹಿಮ, ಹಿಮ, ಹಿಮ, ಎಲ್ಲೆಲ್ಲೂ ಇದರದ್ದೇ ಪ್ರತಾಪ. ಮನೆಯ ಚಾವಣಿಯ ಮೇಲೆ, ರೈಲು ಹಳಿಯ ಮೇಲೆ, ರೈಲಿನ ಮೇಲೆ, ವಿಮಾನ ನಿಲ್ದಾಣಗಳಲ್ಲಿ ನಿಲ್ಲಿಸಿದ ವಿಮಾನಗಳ ಮೇಲೆ, ಕಾರು ಪಾರ್ಕಿಂಗ್‌ಗಳಲ್ಲಿ ಅವುಗಳ ಅಸ್ತಿತ್ವವನ್ನೇ ಮರೆಸುವಂತೆ ಹಿಮ ಬಿದ್ದಿವೆ.

ಅಮೆರಿಕಕ್ಕೆ ಹಿಡಿದ ಚಳಿ ಬೇರೆ ದೇಶಗಳನ್ನು ಆವರಿಸುವುದು ಬೇಗ. ಅಲ್ಲಿ ಮಳೆ ಬಿದ್ದರೆ ಬೇರೆಡೆ ಕೊಡೆ ಹಿಡಿಯಲೇ ಬೇಕು. ಅಮೆರಿಕ ಸಹಸ್ರಾರು ವಿಮಾನಗಳ ಸಂಚಾರವನ್ನು ಸ್ಥಗಿತಗೊಳಿಸಿದೆ. ಹಳಿಗಳ ಮೇಲೆ ಬಿದ್ದ ಹಿಮ ರೈಲು ಸಂಚಾರನ್ನು ಸ್ಥಗಿತಗೊಳಿಸಿದ್ದು ಮಾತ್ರವಲ್ಲ, ಒಳಗೆ ಇರುವಂತಿಲ್ಲ, ಹೊರಗೂ ಹೋಗುವಂತಿಲ್ಲ ಎನ್ನುವ ಸ್ಥಿತಿ ನಿರ್ಮಾಣವಾಗಿದೆ. ಶೌಚಕ್ಕೂ ನೀರಿಲ್ಲ. ಸ್ಯಾನ್‌ಫ್ರಾನ್ಸಿಸ್ಕೋ, ನ್ಯೂಯಾರ್ಕ್, ಷಿಕಾಗೋ, ಬಫೆಲೊ, ಬಾಸ್ಟನ್, ಫಿಲಡೆಲ್ಫಿಯಾ ವಿಮಾನ ನಿಲ್ದಾಣಗಳ ಪ್ರಯಾಣಿಕರ ಪಾಡು ಕರುಣಾಜನಕ. ಜರ್ಮನಿ, ರಷ್ಯದಲ್ಲೂ ಇದೇ ಪಾಡು ಮಲಗಲು ಮಂಚ, ಹೊದಿಕೆ ನೀಡಿ ತಾತ್ಕಾಲಿಕ ವಸತಿ ಕಲ್ಪಿಸಲಾಗಿತ್ತು. ನಮ್ಮಲ್ಲಿ ಪ್ರಯಾಣಿಕರು ರೈಲು ನಿಲ್ದಾಣದಲ್ಲಿಯೇ ಮಲಗಿ ಕಾಲ ಕಳೆಯುವಂತೆ ಅಲ್ಲಿ ವಿಮಾನ ನಿಲ್ದಾಣಗಳಲ್ಲಿಯೇ ಮಲಗಿ ಜನರು ಕಾಲ ಕಳೆದರು.



ಒಂದು ತಿಂಗಳಲ್ಲಿ 50 ಸಾವಿರ ವಿಮಾನ ಹಾರಾಟ ರದ್ದು

ಮಂಜುಗಡ್ಡೆ ಉತ್ಸವ ಎಂದರೆ ಚೀನಾ ಮತ್ತು ರಷ್ಯದಲ್ಲಿ ಒಂದು ದೊಡ್ಡ ಸಂಭ್ರಮ. ಚಿಲ್ಟಾರಿಗಳಿಂದ ವಯೋವೃದ್ಧರ ವರೆಗೆ ಎಲ್ಲರೂ ಸಂಭ್ರಮಪಡುತ್ತಾರೆ. ಹಿಮದ ಗಾಳಿ, ಹಿಮ 'ವರ್ಷ'ದ ಮಧ್ಯೆ ರಷ್ಯದಲ್ಲಿ ಮಂಜುಗಡ್ಡೆಯ ಉತ್ಸವವನ್ನು ಈ ಬಾರಿ ಹಮ್ಮಿಕೊಳ್ಳಲಾಗಿದೆ.

ಚೀನಾ ಹಿಮಗಾಳಿ ಬೀಸುವ ಮುನ್ನವೇ ಇಂತಹ ಉತ್ಸವ ನಡೆಸಿತ್ತು. ಮಂಜುಗಡ್ಡೆಯಲ್ಲಿಯೇ ಬೌದ್ಧ ದೇವಾಲಯ, ಪ್ರಾಚೀನ ಅರಮನೆ ಮತ್ತು ಚಾರಿತ್ರಿಕ ಕಟ್ಟಡಗಳ ನಿರ್ಮಾಣ ಮಾಡಿ ಪ್ರವಾಸಿಗರನ್ನು ಆಕರ್ಷಿಸಿತ್ತು. ಅವುಗಳಿಗೆ ಮಾಡಿದ ದೀಪಾಲಂಕಾರ ಅವುಗಳ ಚೆಲುವನ್ನು ಇಮ್ಮಡಿಸಿತ್ತು.

ಹಿಮ ಬೀಳುವ ದಿನಗಳು ಯಾವಾಗಲೂ ಕರಾಳ ದಿನಗಳಲ್ಲ. ವಿಶ್ವದ ಅತೀ ದೊಡ್ಡ ಹಿಮದ ಉತ್ಸವ ಫಿನ್‌ಲ್ಯಾಂಡಿನ ಕೆಮೆ ಎಂಬಲ್ಲಿ ನಡೆಯುತ್ತದೆ. 1928ರಿಂದ ಮಿಚಿಗನ್‌ನ ತಾಂತ್ರಿಕ ವಿಶ್ವವಿದ್ಯಾಲಯ ಹಿಮದ ಉತ್ಸವ ನಡೆಸಿ ಹಿಮದಲ್ಲಿ ಶಿಲ್ಪ ರೂಪಿಸುವವರಿಗೆ ಪ್ರತಿಭೆ ಪ್ರಕಾಶನಕ್ಕೆ ಅವಕಾಶ ನೀಡಿದೆ.

–ಪಿ.ಎಸ್.ಧರ್



ನ್ಯೂಯಾರ್ಕ್‌ನಲ್ಲಿ ಹಿಮಾವೃತ ರಸ್ತೆ; ಜನಜೀವನ ಸ್ತಬ್ದ



ಕಾಶ್ಮೀರದಲ್ಲಿ...